

# ಮೋಹಕ ಪುಷ್ಪ ಡೇಲಿಯಾ

ನೋಡಿದ ಕೂಡಲೇ ಕಣ್ಮನ ಸೆಳೆಯುವ ಇದುವೇ ಮೋಹಕ ಪುಷ್ಪ ಡೇಲಿಯಾ. ಭೂಮಿಯ ಒಳಗಿರುವ ಇದರ ಗೆಡ್ಡೆಯಿಂದ ಹೊಸ ಸಸ್ಯಗಳನ್ನು ಪಡೆಯುವುದರಿಂದ ಇದಕ್ಕೆ ಗೆಡ್ಡೆ ಹೂವು, ಆಡು ಭಾಷೆಯಲ್ಲಿ ಡೇರೆ ಹೂವು ಎಂಬ ಹೆಸರೂ ಇದೆ.

ಆಸ್ಟೆರೇಸಿ ಕುಟುಂಬಕ್ಕೆ ಸೇರಿದ ಈ ಸಸ್ಯದಲ್ಲಿ ಸಸ್ಯಶಾಸ್ತ್ರಜ್ಞರು ಮೂವತ್ತಾರು ಪ್ರಭೇದಗಳನ್ನು ಗುರುತಿಸಿದ್ದಾರೆ. ಒಂದೊಂದು ಪ್ರಭೇದವೂ ಮತ್ತೊಂದಕ್ಕಿಂತ ಬಣ್ಣ, ಆಕಾರ ಹಾಗೂ ಗಾತ್ರದಲ್ಲಿ ಭಿನ್ನವಾಗಿರುತ್ತದೆ. ಕೆಂಪು, ಕುಂಕುಮ ಕೆಂಪು, ನೇರಳೆ, ಊದಾ ನಸುಗುಲಾಬಿ, ತಿಳಿಹಳದಿ ಮತ್ತು ಬಿಳಿ ಬಣ್ಣದ ಅಥವಾ ಎರಡು ಮೂರು ಬಣ್ಣಗಳ ಸಂಯೋಜನೆ ಹೊಂದಿರುವ ಹೂಗಳ ಸೊಬಗು ವರ್ಣನಾತೀತ. ಕೆಲವು ಹೂಗಳಲ್ಲಿ ದಳಗಳು ಒಂದೇ ಸುತ್ತಿನಲ್ಲಿ ಇದ್ದರೆ ಬಹಳಷ್ಟು ಹೂಗಳಲ್ಲಿ ಹಲವು ಸುತ್ತುಗಳಲ್ಲಿದ್ದು ಒತ್ತಾಗಿ ಜೋಡಣೆಯಾಗಿರುತ್ತವೆ. ಗಾತ್ರವೂ ಅಷ್ಟೇ. ಸೇವಂತಿಗೆಯಷ್ಟು ಚಿಕ್ಕ ಹೂನಿಂದ ಅಂಗೈನಷ್ಟು ಅಥವಾ ಅದಕ್ಕಿಂತ ದೊಡ್ಡದಾದ ಹೂಗಳೂ ಇರುತ್ತವೆ. ಕೆಲವು ಹೂಗಳ ದಳಗಳು ತುದಿಗಳಲ್ಲಿ ಮೊಂಡಾಗಿದ್ದರೆ ಮತ್ತೆ ಕೆಲವು ಹೂಗಳಲ್ಲಿ ಚೂಪಾಗಿ ಇರುತ್ತವೆ.

ಡೇಲಿಯಾಗಳನ್ನು ದೇವರ ಪೂಜೆಗಳಲ್ಲಿ ದೇವಿಯ ಅಲಂಕಾರಕ್ಕೆ ಬಳಸುತ್ತಾರೆ. ಇದನ್ನು ಕೆಲವರು ಮುಡಿಯುವುದೂ ಇದೆ. ಅಲಂಕಾರಿಕ ಉದ್ದೇಶಗಳಿಗೆ ಬಳಸುವುದೇ ಹೆಚ್ಚು.

ಫಲಪುಷ್ಪ ಪ್ರದರ್ಶನಗಳಲ್ಲಿ ಗಮನ ಸೆಳೆಯುವುದು ಬಣ್ಣ ಬಣ್ಣದ ಡೇಲಿಯಾ ಹೂಗಳೇ. ಕುಂಡಗಳಲ್ಲಿ ಅರಳಿಸುವ ವಿವಿಧ ಬಣ್ಣಗಳ ಹೂಗಳು ಪುಷ್ಪ ಪ್ರಿಯರಿಗೆ ಸ್ವಾಗತ ಕೋರುತ್ತ ಪ್ರದರ್ಶನದ ಆಕರ್ಷಣೆಯನ್ನು ಹೆಚ್ಚಿಸುತ್ತವೆ. ನಮ್ಮ ನೆಲದ ಹೂಗಳೇ ಎಂದುಕೊಳ್ಳುವಷ್ಟು ನಮಗೆ ಆಪ್ತವಾಗಿರುವ ಡೇಲಿಯಾಗಳ ತವರು ಮೆಕ್ಸಿಕೋ, ಮಧ್ಯ ಅಮೆರಿಕ ಹಾಗೂ ಕೊಲಂಬಿಯಾ. ಇದು ಮೆಕ್ಸಿಕೋ ದೇಶದ ರಾಷ್ಟ್ರಪುಷ್ಪವೂ ಆಗಿದೆ. ಭಾರತವನ್ನು ಒಳಗೊಂಡಂತೆ ಹಲವಾರು ದೇಶಗಳಲ್ಲಿ ಡೇಲಿಯಾವನ್ನು ಬೆಳೆಯುತ್ತಿದ್ದಾರೆ.



ಚಿತ್ರ-ಬರಹ: ಪದ್ಮಜಾ ಸುಂದರೇಶ್